ಪ್ರಶ್ನೆಪತ್ರಿಕೆ ಕ್ರಮ ಸಂಖ್ಯೆ :
**Q.P. Sl. No. :**

**ಮಾರ್ಚ್/ಏಪ್ರಿಲ್ 2026 ರ ಪರೀಕ್ಷೆ-1**
**MARCH/APRIL 2026 EXAMINATION-1**

ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 12 ]
Total No. of Printed Pages : 12 ]

ಒಟ್ಟು ಪ್ರಶ್ನೆಗಳ ಸಂಖ್ಯೆ : 45 ]
Total No. of Questions : 45 ]

**A**

**CCE RF/RR/ PF/PR**

**ಸಂಕೇತ ಸಂಖ್ಯೆ : 01-K** **Code No. : 01-K**

# ವಿಷಯ : ಪ್ರಥಮ ಭಾಷೆ — ಕನ್ನಡ

# Subject : First Language — KANNADA

**(ಶಾಲಾ ಅಭ್ಯರ್ಥಿ / ಶಾಲಾ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಅಭ್ಯರ್ಥಿ/ ಖಾಸಗಿ ಪುನರಾವರ್ತಿತ ಅಭ್ಯರ್ಥಿ)**
**(Regular Fresh / Regular Repeater / Private Fresh/ Private Repeater)**

ದಿನಾಂಕ : 18. 03. 2026 ] [ Date : 18. 03. 2026
ಸಮಯ : ಬೆಳಗ್ಗೆ 10-00 ರಿಂದ ಮಧ್ಯಾಹ್ನ 1-15 ರವರೆಗೆ ] [ Time : 10-00 A.M. to 1-15 P.M.
ಗರಿಷ್ಠ ಅಂಕಗಳು : 100 ] [ Max. Marks : 100

**ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :**

**Cut here/ಇಲ್ಲಿ ಕತ್ತರಿಸಿ**

1. ಈ ಪ್ರಶ್ನೆಪತ್ರಿಕೆಯು ಒಟ್ಟು 45 ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ **ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ (ಬಾಣದ ಗುರುತನ್ನು ಅನುಸರಿಸಿ)**. ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ಸೂಚಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.



01-K 10/801
Tear here/ಇಲ್ಲಿಂದ ಕತ್ತರಿಸಿ
TEAR HERE TO OPEN THE QUESTION PAPER WITH REVERSE JACKET
ಹಿಮ್ಮುಖ ಜಾಕೆಟ್ ಜೊಂದಿರುವ ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ
Tear here/ಇಲ್ಲಿಂದ ಕತ್ತರಿಸಿ

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ :** **6 × 1 = 6**

1. ಕನ್ನಡ ವರ್ಣಮಾಲೆಯಲ್ಲಿರುವ ಅವರ್ಗೀಯ ವ್ಯಂಜನಗಳ ಸಂಖ್ಯೆ

   (ಎ) ೬

   (ಬಿ) ೭

   (ಸಿ) ೮

   (ಡಿ) ೯

2. 'ವಧೂಪೇತ' ಪದವು ಈ ಸಂಧಿಗೆ ಸೇರಿದೆ

   (ಎ) ಲೋಪ ಸಂಧಿ

   (ಬಿ) ಸವರ್ಣದೀರ್ಘ ಸಂಧಿ

   (ಸಿ) ವೃದ್ಧಿ ಸಂಧಿ

   (ಡಿ) ಗುಣ ಸಂಧಿ

01-K 10/801

3. ಪಾರಿಭಾಷಿಕ ಪದಗಳನ್ನು ಬಳಸುವಾಗ, ಅನ್ಯಭಾಷೆ ಪದಗಳನ್ನು ಬಳಸುವಾಗ, ಪ್ರಮುಖ ಪದಗಳನ್ನು ಸೂಚಿಸುವಾಗ ಬಳಸುವ ಲೇಖನ ಚಿಹ್ನೆ

(ಎ) ಪ್ರಶ್ನಾರ್ಥಕ

(ಬಿ) ಭಾವಸೂಚಕ

(ಸಿ) ವಾಕ್ಯವೇಷ್ಟನ

(ಡಿ) ಆವರಣ

4. ವರ್ತಮಾನ ಕಾಲಸೂಚಕ ಪ್ರತ್ಯಯವಿದು

(ಎ) ದ

(ಬಿ) ಉವ

(ಸಿ) ವ

(ಡಿ) ಉತ್ತ

01-K-10/801

5. ದ್ವಿತೀಯಾ ವಿಭಕ್ತಿಯ ಕಾರಕಾರ್ಥವಿದು

(ಎ) ಕರ್ಮಾರ್ಥ

(ಬಿ) ಕರ್ತ್ರಾರ್ಥ

(ಸಿ) ಸಂಪ್ರದಾನ

(ಡಿ) ಅಧಿಕರಣ

6. 'ಮಾದ್ರಮಾಗಧಯಾದವರು' ಪದವು ಈ ಸಮಾಸಕ್ಕೆ ಸೇರಿದೆ

(ಎ) ತತ್ಪುರುಷ

(ಬಿ) ದ್ವಂದ್ವ

(ಸಿ) ಕ್ರಿಯಾ

(ಡಿ) ಬಹುವ್ರೀಹಿ

01-K 10/801

**II. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ :** **4 × 1 = 4**

7. ಅಮೃತ : ಅಮರ್ದು :: ಕಾರ್ಯ : .........................

8. ಅಷ್ಟು : ಪರಿಮಾಣವಾಚಕ :: ಹನ್ನೆರಡು : .........................

9. ಹಾಲ್ಜೇನು : ಜೋಡುನುಡಿ :: ತುತ್ತತುದಿ : .........................

10. ನಿನಗಾಗಿ : ತದ್ಧಿತಾಂತಾವ್ಯಯ :: ಪೆರ್ಮೆ : .........................

**III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** **7 × 1 = 7**

11. ಕನ್ನಡಕ್ಕೆ ಪರ್ಷಿಯನ್ ಶಬ್ದಗಳು ಯಾವಾಗ ಬಂದವು ?

12. ಹುಲಿಗೆ ಪರಮಾನಂದವಾಗಲು ಕಾರಣವೇನು ?

13. ಲಂಡನ್ ನಗರದಲ್ಲಿ ಪ್ರಸಿದ್ಧಿ ಪಡೆದ ಸಿಂಪಿಗಳ ಹೆಸರೇನು ?

14. ಸೂರ್ಯಮಿತ್ರನು ತನಗೆ ಕಾಶ್ಯಪಿಯೆಂಬ ತಂಗಿಯಿಲ್ಲ ಎಂದು ಹೇಳಲು ಕಾರಣವೇನು ?

15. ಹಲಗಲಿ ಗ್ರಾಮ ಎಲ್ಲಿದೆ ?

16. ಪರಶುರಾಮನು ದ್ರೋಣನಿಗೆ ಯಾವುದರಲ್ಲಿ ಅರ್ಘ್ಯವನ್ನು ನೀಡಿದನು ?

17. ಪುಟ್ಟ ಪೋರಿಯ ಅಮ್ಮನ ತೂತುಬಿದ್ದ ಸೀರೆಯಲ್ಲಿ ಯಾರು ಸೊರಗಿದ್ದಾರೆ ?

01-K 10/801

**IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 10 × 2 = 20**

18. ಲಿಪಿಯ ಜಾಡು ಹೇಗೆ ಆರಂಭಗೊಂಡಿತು ?

19. ವಿಶ್ವೇಶ್ವರಯ್ಯನವರ ವಿದ್ಯಾಭ್ಯಾಸವನ್ನು ಕುರಿತು ಬರೆಯಿರಿ.

20. ವೂಲವರ್ಥ ಅಂಗಡಿಯಲ್ಲಿ ಸಿಗುವ ವಸ್ತುಗಳನ್ನು ಹೆಸರಿಸಿ.

21. ಅಗ್ನಿಭೂತಿ ವಾಯುಭೂತಿಯರು ಸೂರ್ಯಮಿತ್ರನಿಂದ ಕಲಿತ ವಿದ್ಯೆಗಳಾವುವು ?

22. ಹೊಸಗಾಲದ ಹಸುಮಕ್ಕಳನ್ನು ಹಕ್ಕಿ ಹೇಗೆ ಹರಸಿದೆ ?

23. ಹಲಗಲಿಗೆ ದಂಡು ಬರಲು ಕಾರಣವೇನು ?

24. ಬಾಲಕ ಭಗತ್‌ಸಿಂಗ್ ಜಲಿಯನ್ ವಾಲಾಬಾಗ್ ಹತ್ಯಾಕಾಂಡದ ಸ್ಥಳದಲ್ಲಿನ ಮಣ್ಣನ್ನು ಸಂಗ್ರಹಿಸಿದ ಬಗೆಯನ್ನು ಬರೆಯಿರಿ.

25. ರಾಜಕೀಯ ಸ್ವಾತಂತ್ರ್ಯದ ಮಹತ್ವವನ್ನು ತಿಳಿಸಿ.

26. ಜ್ಞಾನಿ ಅಜ್ಞಾನಿಗಳ ಸಂಗದ ಬಗೆಗಿನ ಅಭಿಪ್ರಾಯವನ್ನು ಅಕ್ಕಮಹಾದೇವಿ ತನ್ನ ವಚನದಲ್ಲಿ ಹೇಗೆ ವ್ಯಕ್ತಪಡಿಸಿದ್ದಾಳೆ ?

27. ರಾಜರ ಪ್ರಕೃತಿ ಹೇಗಿರುತ್ತದೆ ?

01-K 10/801

**V. ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ : 2 × 3 = 6**

28. ಎ.ಎನ್. ಮೂರ್ತಿರಾವ್

29. ರನ್ನ

**VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ : 1 × 3 = 3**

30. ನೆನೆಯದಿರಣ್ಣ ಭಾರತದೊಳಿಂ ಪೆಱರಾರುಮನೊಂದೆ ಚಿತ್ತದಿಂ

**VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ : 1 × 3 = 3**

31. "ಸೀತೆಯ ಮುಖಕಮಲ ಅರಳಿತು"

**VIII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ತ್ವದೊಂದಿಗೆ ವಿಸ್ತರಿಸಿ ಬರೆಯಿರಿ : 1 × 3 = 3**

32. ಮಾತೇ ಮುತ್ತು, ಮಾತೇ ಮೃತ್ಯು.

**ಅಥವಾ**

ಸತ್ಯಕ್ಕೆ ಸಾವಿಲ್ಲ; ಸುಳ್ಳಿಗೆ ಸುಖವಿಲ್ಲ.

**IX. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ : 6 × 3 = 18**

33. "ಶಿಕ್ಷಣವು ಸಂಜೀವಿನಿ ಎಂಬುದನ್ನರಿತಿದ್ದ ಅವರು ಶಿಕ್ಷಣದ ವಿವಿಧ ಯೋಜನೆಗಳನ್ನು ರೂಪಿಸಿದರು."

34. "ಯಾವ ಜೀವಿಯೂ ತನ್ನಷ್ಟಕ್ಕೆ ತಾನಿಲ್ಲ."

35. "ನಾನು ಯುದ್ಧ ಮಾಡುವ ಮೂರ್ಖರ ಕಡೆಯವನಲ್ಲ."

36. "ಮುಗಿಲಿಗೆ ರೆಕ್ಕೆಗಳೊಡೆದವೊ ಅಣ್ಣಾ"

37. "ಹಸುರಾದುದು ಕವಿಯಾತ್ಮಂ"

38. "ದ್ರುಪದಂ ಕಡುಸಿಗ್ಗು ಮಾಡಿದಂ"

**X. ಕೆಳಗಿನ ಪದ್ಯ ಭಾಗವನ್ನು ಪೂರ್ಣಗೊಳಿಸಿ ಬರೆಯಿರಿ :** **1 × 4 = 4**

39. ಕಲುಷಿತವಾದೀ ...................................................

...................................................................

...................................................................

..................................................... ಮುಟ್ಟೋಣ

**ಅಥವಾ**

ಮತಗಳೆಲ್ಲವೂ ...................................................

...................................................................

...................................................................

........................................................ ಬಿತ್ತೋಣ

**XI. ಕೆಳಗಿನ ಪದ್ಯ ಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ :** **1 × 4 = 4**

40. ಎತ್ತಣ ತುರಂಗಮಿದು ಪೊಕ್ಕು ಪೂದೋಟಮಂ
ತೊತ್ತಳದುಳಿದುದು ವಾಲ್ಮೀಕಿ ಮುನಿನಾಥನೇ
ಪೊತ್ತುಮಾರೈವುದೆಂದೆನಗೆ ನೇಮಿಸಿ ಪೋದನಬ್ಧಿಪಂ ಕರೆಸಲಾಗಿ
ಮತ್ತೆ ವರುಣನ ಲೋಕದಿಂ ಬಂದು ಮುಳಿದಪನೆ
ನುತ್ತ ಹಯದೆಡೆಗೆ ನಡೆತಂದು ನೋಡಲ್ಕದರ
ನೆತ್ತಿಯೊಳ್ ಮೆರೆವ ಪಟ್ಟದ ಲಿಖಿತಮಂ ಕಂಡು ಲವನೋದಿಕೊಳುತಿರ್ದನು



01-K 10/801

**XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 2 × 4 = 8**

41. ಶಬರಿ ಹಾಗೂ ಶ್ರೀರಾಮನ ನಡುವೆ ನಡೆದ ಸಂಭಾಷಣೆಯ ಸ್ವಾರಸ್ಯವನ್ನು ನಿಮ್ಮ ಮಾತುಗಳಲ್ಲಿ ವಿವರಿಸಿ.

**ಅಥವಾ**

ಶಬರಿಯ ಸಡಗರ, ಸಂತೋಷ ಮೇಳದವರ ಹಾಡಿನಲ್ಲಿ ವರ್ಣಿತವಾಗಿರುವ ಬಗೆಯನ್ನು ವಿವರಿಸಿ.

42. ಕೃಷ್ಣನು ಭೇದತಂತ್ರವನ್ನು ಬಳಸಿ ಕರ್ಣನಿಗೆ ಒಡ್ಡಿದ ಆಮಿಷಗಳನ್ನು ಸಂಗ್ರಹಿಸಿ ಬರೆಯಿರಿ.

**ಅಥವಾ**

ಕೃಷ್ಣನಿಂದ ಜನ್ಮರಹಸ್ಯವನ್ನು ಕೇಳಿ ಪಾಂಡವರಿಗೆ ಅಪಾಯವಾಗದಂತೆ ನಿರ್ಧಾರ ಕೈಗೊಳ್ಳುವ ಕರ್ಣನ ಮನಸ್ಥಿತಿಯನ್ನು ಕುರಿತು ಬರೆಯಿರಿ.

**XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ : 1 × 4 = 4 ( 2 + 2 )**

43. ಭಾರತೀಯ ಸಂಗೀತ ಸಾಮ್ರಾಜ್ಯದಲ್ಲಿ ಸಾಮ್ರಾಜ್ಞೆಯಾಗಿ ಮಹಾನ್ ಪ್ರಖ್ಯಾತಿಗಳಿಸಿದವರು ಎಂ.ಎಸ್. ಸುಬ್ಬುಲಕ್ಷ್ಮಿ. ರಾಜ್ಯಸಭಾ ಸದಸ್ಯರಾಗಿ ಎಂದು ಭಾರತ ಘನ ಸರ್ಕಾರದಿಂದ ಕೋರಿಕೆ ಬಂದಾಗ, "ನನಗೆ ಸಂಗೀತ ಕ್ಷೇತ್ರದಲ್ಲಿ ಮಾತ್ರ ತಿಳಿವಳಿಕೆ, ಜ್ಞಾನ, ವಿದ್ವತ್ತು ಇದೆಯೆಂದು ಭಾವಿಸಿದ್ದೇನೆ. ನನಗಿಂತ ಓದಿದವರು, ಅನುಭವವುಳ್ಳವರು ಆ ಸ್ಥಳದಲ್ಲಿದ್ದರೆ ಅವರಿಂದ ನಮ್ಮ ದೇಶದ ಜನರಿಗೆ ಉತ್ತಮ ಸೇವೆ ದೊರಕಬಹುದು. ಜನರ ಮನಸ್ಸಿನಲ್ಲಿ ನನಗೆ ಸ್ಥಾನ ಸಿಕ್ಕಿದೆ. ಅವರ ಪ್ರೀತಿ ದೊರಕಿದೆ. ಈ ಪ್ರೀತಿ ಮತ್ತು ಗೌರವಗಳಿಗಿಂತ ರಾಜ್ಯಸಭೆಯ ಸ್ಥಾನ ಹೆಚ್ಚಿನದಲ್ಲ" ಎಂದು ಭಾರತ ಸರ್ಕಾರಕ್ಕೆ ಪತ್ರ ಬರೆದು ಸುಲಭವಾಗಿ ತಿರಸ್ಕರಿಸಿದ ಅಪರೂಪದ ವ್ಯಕ್ತಿ ಭಾರತರತ್ನ ಪ್ರಶಸ್ತಿ ಪುರಸ್ಕೃತ ಮಹಿಳೆ ಶ್ರೀಮತಿ ಎಂ.ಎಸ್. ಸುಬ್ಬುಲಕ್ಷ್ಮಿ ಸದಾಶಿವಂ.



01-K 10/801

ಎಂ.ಎಸ್. ಸುಬ್ಬುಲಕ್ಷ್ಮಿ ಅವರು ಕ್ರಿ.ಶ. ೧೯೧೬ನೇ ಸೆಪ್ಟೆಂಬರ್ ೧೬ ರಂದು ತಮಿಳುನಾಡಿನ ಮಧುರೈ ನಗರದಲ್ಲಿ ಜನಿಸಿದರು. ತಂದೆ ಸಂಗೀತ ಪ್ರೇಮಿಯಾಗಿದ್ದ ಸುಬ್ರಹ್ಮಣ್ಯ ಅಯ್ಯರ್. ತಾಯಿ ಪ್ರಖ್ಯಾತ ವೀಣಾವಾದಕಿ ಷಣ್ಮುಖವಡಿವು. ಸುಬ್ಬುಲಕ್ಷ್ಮಿಯವರು ಐದನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾಗ, ಶಿಕ್ಷಕಿಯೊಬ್ಬರು ಆಕೆಯನ್ನು ಹೊಡೆದರು. ಸೂಕ್ಷ್ಮ ಪ್ರಕೃತಿಯ ಹುಡುಗಿ ಪ್ರಜ್ಞೆ ತಪ್ಪಿ ಬಿದ್ದಳು. ಬೇಗನೆ ಪ್ರಜ್ಞೆ ಬಂತು. ಆದರೆ ಕೆಮ್ಮು ಬರಲು ಪ್ರಾರಂಭವಾಯಿತು. ನಂತರ ಪಡೆದ ಚಿಕಿತ್ಸೆಯಿಂದ ಗುಣವಾದಳು. ಇದನ್ನು ಗಂಭೀರವಾಗಿ ಭಾವಿಸಿದ ತಾಯಿ ಷಣ್ಮುಖವಡಿವುರವರು ತಮ್ಮ ಮಗಳಾದ ಸುಬ್ಬುಲಕ್ಷ್ಮಿರವರ ಶಾಲಾ ಶಿಕ್ಷಣವನ್ನು ಅಲ್ಲಿಗೇ ಮೊಟಕುಗೊಳಿಸಿದರು.

ಸುಬ್ಬುಲಕ್ಷ್ಮಿಯವರಿಗೆ ಸಂಗೀತದಲ್ಲಿ ತಮ್ಮ ತಾಯಿಯೇ ಪ್ರಥಮ ಗುರು. ತಾಯಿಯು ರೂಢಿಯಲ್ಲಿರುವ ಸಂಗೀತದ ಅಭ್ಯಾಸಗಳನ್ನು ವಿವರಿಸುತ್ತಿದ್ದರು. ಸುಬ್ಬುಲಕ್ಷ್ಮಿ ಮತ್ತು ಆಕೆಯ ತಂಗಿಯಾದ ವಡಿವಾಂಬಾಳ್ ಮುಂದಿನದನ್ನು ಕೇಳಿ ತಾವೇ ಅಭ್ಯಾಸ ಮಾಡುತ್ತಿದ್ದರು. ಹಾಡುಗಾರಿಕೆಗೆ ಹೇಳಿ ಮಾಡಿಸಿದಂತಿದ್ದ ಸುಮಧುರ ಕಂಠವಿರುವ ಸುಬ್ಬುಲಕ್ಷ್ಮಿ ಯಾವುದನ್ನೇ ಹಾಡಿದರೂ ಎಂಥವರೂ ತಲೆದೂಗುವಂತಿರುತ್ತಿತ್ತು. ಮಗಳಲ್ಲಿ ಕಂಡುಬರುತ್ತಿದ್ದ ಸಂಗೀತದ ಬಗೆಗಿನ ಆಸಕ್ತಿ ಹಾಗೂ ಶ್ರದ್ಧೆಯನ್ನು ಕಂಡು ಬಹಳವಾಗಿ ಸಂತೋಷ ಪಡುತ್ತಿದ್ದ ತಾಯಿ, ಆಕೆಗೆ ಸಂಗೀತದಲ್ಲಿ ವಿಶೇಷ ಶಿಕ್ಷಣ ನೀಡಲು ಮುಂದಾದರು.

***<u>ಪ್ರಶ್ನೆಗಳು:</u>***

ಅ) ಸುಬ್ಬುಲಕ್ಷ್ಮಿಯವರು ಶಾಲೆಯನ್ನು ಬಿಡಲು ಕಾರಣವೇನು ?

ಆ) ರಾಜ್ಯಸಭಾ ಸದಸ್ಯರಾಗಿ ಎಂಬ ಕೋರಿಕೆ ಬಂದಾಗ ಸುಬ್ಬುಲಕ್ಷ್ಮಿಯವರ ಪ್ರತಿಕ್ರಿಯೆಯನ್ನು ತಿಳಿಸಿ.

01-K-10/801

**XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ :** **1 × 5 = 5**

44. ನಿಮ್ಮನ್ನು ಚಿಕ್ಕಮಗಳೂರಿನ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ 'ನೇಹಾ' ಎಂದು ಭಾವಿಸಿಕೊಂಡು, ಜಿಲ್ಲೆಯಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಚಿತ ತರಬೇತಿ ಕೇಂದ್ರವನ್ನು ಸ್ಥಾಪಿಸುವಂತೆ ಕೋರಿ, ಮಾನ್ಯ ಶಿಕ್ಷಣ ಸಚಿವರಿಗೆ ಪತ್ರವನ್ನು ಬರೆಯಿರಿ.

**ಅಥವಾ**

ನಿಮ್ಮನ್ನು ಶಿವಮೊಗ್ಗದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ದಿಗಂತ್' ಎಂದು ಭಾವಿಸಿಕೊಂಡು, ಶಾಲೆಯಲ್ಲಿ ಆಚರಿಸಿದ ಗ್ರಂಥಸಪ್ತಾಹ ಕಾರ್ಯಕ್ರಮವನ್ನು ಕುರಿತು, ಬಳ್ಳಾರಿಯಲ್ಲಿ ವಾಸವಾಗಿರುವ 'ಶ್ರೀನಿವಾಸ್' ಎಂಬ ಹೆಸರಿನ ತಂದೆಗೆ ಪತ್ರವನ್ನು ಬರೆಯಿರಿ.

**XV. ಕೆಳಗಿನ ಯಾವುದಾದರೂ ಒಂದು ವಿಷಯಕ್ಕೆ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ :** **1 × 5 = 5**

45. ಪ್ರಾಚ್ಯಸ್ಮಾರಕಗಳ ಸಂರಕ್ಷಣೆ.

**ಅಥವಾ**

ಹೆಣ್ಣುಮಕ್ಕಳಿಗೆ ಸರ್ಕಾರದ ಸೌಲಭ್ಯಗಳು.

01-K-10/801

DO NOT WRITE ANYTHING HERE